೯೮ ನೇ th

ವಾರ್ಷಿಕ ವರದಿ

**2025-2026**

RBI Licence 536,
P 5-9-1986
Estd. 2-8-1928












# ದಿ. ಹುಕ್ಕೇರಿ ಅರ್ಬನ್ ಕೋ- ಆಪ್ ಬ್ಯಾಂಕ ಲಿ., ಹುಕ್ಕೇರಿ

# THE HUKKERI URBAN CO-OP BANK LTD., HUKKERI


H.O. Ph.: 08333-265067, Fax : 08333-266300 : admin@hukkeribank.in


## 2026-27 ನೇ ಸಾಲಿನ ಯೋಜನೆಗಳು

ATM



IMPS



Mobile Banking



UPI



- Sankeshwar Branch : 08333-274613
- Peeranwadi Branch : 0831-2411991
- Kittur Branch : 08288-274614
- B. K. Kangrali Branch : 0831-2002656
- Mudalagi Branch : 08334-251067

ವಾರ್ಷಿಕ ಮಹಾಸಭೆ : ಶನಿವಾರ ದಿನಾಂಕ 29-08-2026 ಮಧ್ಯಾಹ್ನ 03-00 ಗಂಟೆಗೆ

ಸ್ಥಳ : ಸಿ.ಎಸ್. ತುಬಚಿ, ಶಿಕ್ಷಣ ಸಂಸ್ಥೆಯ ಚಿಣ್ಣರ ಭವನ, ಹುಕ್ಕೇರಿ.

# ದಿ. ಹುಕ್ಕೇರಿ ಅರ್ಬನ್ ಕೋ- ಆಪ್ ಬ್ಯಾಂಕ ಲಿ., ಹುಕ್ಕೇರಿ

## ಪದಾಧಿಕಾರಿಗಳು



**ಶ್ರೀ. ಚಂದ್ರಶೇಖರ ಮ. ಪಾಟೀಲ**
ಅಧ್ಯಕ್ಷರು



**ಶ್ರೀ ಪ್ರಭು ವೀ. ಸಾಂಬಾರೆ**
ಉಪಾಧ್ಯಕ್ಷರು

# ದಿ. ಹುಕ್ಕೇರಿ ಅರ್ಬನ್ ಕೋ- ಆಪ್ ಬ್ಯಾಂಕ ಲಿ., ಹುಕ್ಕೇರಿ

## ಬ್ಯಾಂಕಿನ ನಿರ್ದೇಶಕ ಮಂಡಳಿ



ಶ್ರೀ ವಿಜಯಕುಮಾರ ಬಾ. ರವದಿ



ಶ್ರೀ. ಗುರುಲಿಂಗಪ್ಪ ಈ. ಗಂಧ



ಶ್ರೀ. ಸೋಮಶೇಖರ ಸಾ. ಪಟ್ಟಣಶೆಟ್ಟಿ



ಶ್ರೀ ಶಿವಾನಂದ ವೀ. ನೂಲಿ



ಶ್ರೀ. ಮಲ್ಲಿಕಾರ್ಜುನ ಶಿ. ತೇರಣಿ



ಶ್ರೀ. ಸಿದ್ದೇಶ್ವರ ಚ. ಹೆದ್ದೂರಶೆಟ್ಟಿ



ಶ್ರೀ. ಶಂಕರಗೌಡ ಲ. ಪಾಟೀಲ



ಶ್ರೀ. ಸುಭಾಷ ಮ. ಪಾಟೀಲ



ಶ್ರೀಮತಿ ಗೌರವ್ವಾ ಗು. ನಾಯಿಕ



ಶ್ರೀಮತಿ ಸುವರ್ಣಾ ಕಾ. ಹುಂಡೇಕಾರ



ಶ್ರೀ. ಮೌನೇಶ್ವರ ಸು. ಪೋತದಾರ



ಶ್ರೀ. ರಾಜು ಮ. ಬಾಗಲಕೋಟ



ಶ್ರೀ. ಮಲ್ಲಿಕಾರ್ಜುನ ಭೀ. ಕೋಟ್ಯಾಗೋಳ



ಶ್ರೀ. ರಾಜ ಉ. ಬೋಳಮಲ್ಲ



ಶ್ರೀ. ಮಹಾದೇವ ಗು. ಖಡಬಡಿ



ಶ್ರೀ. ಕೆ. ಬಿ. ಬಂದಾಯಿ
ಪ್ರ. ಪ್ರಧಾನ ವ್ಯವಸ್ಥಾಪಕರು

## ದಿ. ಹುಕ್ಕೇರಿ ಅರ್ಬನ್ ಕೋ- ಆಪ್ ಬ್ಯಾಂಕ ಲಿ., ಹುಕ್ಕೇರಿ

# ಭಾವಪೂರ್ಣ ಶ್ರದ್ಧಾಂಜಲಿ



## ಲಿಂಗೈಕ್ಯ ಶ್ರೀ. ಚನಗೌಡಾ ಬ. ಪಾಟೀಲ

ಸಾ|| ಬಸ್ತವಾಡ

ಮರಣ : 11-04-2025

ದಿವಂಗತರು ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕ ಹುದ್ದೆಗಳಲ್ಲಿ 52 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿ ಬ್ಯಾಂಕಿನ ಏಳ್ಗೆಗೆ ಕಾರಣಿಭೂತರಾದ ಮಹನೀಯರು.

# 97 ನೇ ವಾರ್ಷಿಕ ಸರ್ವಸಾಧಾರಣ ಸಭೆಯ ಕ್ಷಣ ಚಿತ್ರಗಳು











# ದಿ. ಹುಕ್ಕೇರಿ ಅರ್ಬನ್ ಕೋ- ಆಪ್ ಬ್ಯಾಂಕ ಲಿ., ಹುಕ್ಕೇರಿ




**3ನೇ ಬಾರಿ ಬೆಳಗಾವಿ ಜಿಲ್ಲಾ ಅತ್ಯುತ್ತಮ ಸಹಕಾರಿ ಬ್ಯಾಂಕ ಪ್ರಶಸ್ತಿ ಸ್ವೀಕರಿಸಿದ ಸಂದರ್ಭ**



**ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ಇವರು ಬ್ಯಾಂಕಗೆ ಭೇಟಿ ಕೊಟ್ಟ ಸಂದರ್ಭ**

# ದಿ ಹುಕ್ಕೇರಿ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ ಹುಕ್ಕೇರಿ

## ಸನ್ 2025-26 ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು

ಸನ್ಮಾನ್ಯ ಸದಸ್ಯರೇ,

ದಿ. ಹುಕ್ಕೇರಿ ಅರ್ಬನ್ ಕೋ-ಆಪ್. ಬ್ಯಾಂಕ ಲಿ., ಹುಕ್ಕೇರಿ ಇದರ 2025-26 ನೇ ಸಾಲಿನ 98ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ **29-08-2026** ನೇ ಶನಿವಾರ ಮಧ್ಯಾಹ್ನ **03-00** ಗಂಟೆಗೆ ಸಿ.ಎಸ್. ತುಬಚಿ, ಶಿಕ್ಷಣ ಸಂಸ್ಥೆಯ ಚಿಣ್ಣರ ಭವನದಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

### ★ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ★

1. ದಿ. 30-08-2025 ರಂದು ಜರುಗಿದ ಹಿಂದಿನ ವಾರ್ಷಿಕ ಸಭೆಯ ನಡುವಳಿಕೆಗಳನ್ನು ಓದಿ ದೃಡೀಕರಿಸುವುದು.
2. ಬ್ಯಾಂಕಿನ 2025-26 ನೇ ಸಾಲಿನ ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪತ್ರಗಳನ್ನು ಓದಿ ಸ್ವೀಕರಿಸುವುದು.
3. ಬ್ಯಾಂಕಿನ 2025-26 ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿ ಪರಿಶೀಲನೆ.
4. ಬ್ಯಾಂಕಿನ 2025-26 ನೇ ಸಾಲಿನ ಲಾಭ ವಿಭಾಗಣೆ.
5. ಬ್ಯಾಂಕಿನ 2026-27 ನೇ ಸಾಲಿಗಾಗಿ ಕಾರ್ಯಯೋಜನೆಗಳಿಗೆ ಅನುಮೋದನೆ.
6. ಬ್ಯಾಂಕಿನ 2026-27 ನೇ ಸಾಲಿನ ಅಂದಾಜು ಪತ್ರಿಕೆಗೆ ಅನುಮೋದನೆ ನೀಡುವುದು. ಮತ್ತು 2025-26 ನೇ ಸಾಲಿನಲ್ಲಿ ಹೆಚ್ಚಾದ ಖರ್ಚುಗಳಿಗೆ ಮಂಜೂರು ನೀಡುವುದು.
7. ಬ್ಯಾಂಕಿಗೆ ಶಾಸನ ಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಕುರಿತು ರಿಝರ್ವ ಬ್ಯಾಂಕಿನ ಮಾರ್ಗಸೂಚಿಗಳನ್ವಯ ರಚಿಸಿದ ನೇಮಕಾತಿ ಪಾಲಿಸಿ ಪ್ರಕಾರ ಸನ್ 2026-27 ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿಗೆ ಅನುಮೋದನೆ ಕುರಿತು.
8. ವರದಿ ವರ್ಷದಲ್ಲಿ ಸದಸ್ಯತ್ವ ಸ್ವೀಕಾರ ಹಾಗೂ ಸದಸ್ಯತ್ವ ಕಡಿಮೆ ಕುರಿತು ಟಿಪ್ಪಣೆ ಪರಿಶೀಲಿಸಿ ಅನುಮೋದಿಸುವುದು.
9. ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ವಿಮರ್ಶೆ.
10. ಬ್ಯಾಂಕಿನ ಮಂಡಳಿ ಸದಸ್ಯರ ಮತ್ತು ಕಾರ್ಯನಿರ್ವಾಹಕರ ಸಂಬಂಧಿಕರು ಸಿಬ್ಬಂದಿಗಳಾಗಿ ನೇಮಕವಾಗಿದ್ದರೆ ಅಂತಹ ಪಟ್ಟಿಯ ಪರಿಶೀಲನೆ.
11. ಬ್ಯಾಂಕಿನ ಮಂಡಳಿ, ಅವರ ಸಂಬಂಧಿಕರ ಸಾಲಗಳ ಹಾಗೂ ಸುಸ್ತಿಯಾಗಿದ್ದಲ್ಲಿ ವಸೂಲಿಗೆ ಕೈಕೊಂಡ ಕ್ರಮದ ಪರಿಶೀಲನೆ.
12. ಸದಸ್ಯರು ಮಂಡಳಿ ಕಾರ್ಯನಿರ್ವಹಣೆಯ ಬಗ್ಗೆ ದೂರು ಕೊಟ್ಟಿದ್ದಲ್ಲಿ ಅವುಗಳ ಪರಿಶೀಲನೆ.
13. ಬ್ಯಾಂಕಿನ ವಿಚಾರಣಾ ಮತ್ತು ಪರಿವೀಕ್ಷಣಾ ವರದಿ ಹಾಗೂ ಅದರ ಮೇಲಿನ ಮಂಡಳಿಯ ಅನುಪಾಲನಾ ವರದಿ ಪರಿಶೀಲನೆ.
14. ಉಪವಿಧಿಗಳ ತಿದ್ದುಪಡಿ ಕುರಿತು.
15. ಮುನ್ಸೂಚನೆ ಮೇರೆಗೆ ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಸ್ಥಳ : ಹುಕ್ಕೇರಿ
ದಿನಾಂಕ : 08-08-2026

ನಿರ್ದೇಶಕ ಮಂಡಳಿಯ ಅಜ್ಞೆಯ ಮೇರೆಗೆ,
**ಕೆ. ಬಿ. ಬಂಡಾಯಿ**
ಪ್ರಭಾರ ಪ್ರಧಾನ ವ್ಯವಸ್ಥಾಪಕರು

**ಸೂಚನೆಗಳು:**

1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚೆ ಹಾಗೂ ಪರಿಶೀಲನೆಗೆ ಅವಶ್ಯವಿಲ್ಲದ ವಿಷಯಗಳನ್ನು ನೋಟಿಸಿನಲ್ಲಿ ನಮೂದಿಸಿಲ್ಲ.
2. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 20(2)(ಎ) ರನ್ವಯ ಸುಸ್ತಿ ಬಾಕಿದಾರರಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ.
3. ಸಭೆಯಲ್ಲಿ ಚರ್ಚಿಸಲು ಸೂಚಿಸುವ ವಿಷಯಗಳನ್ನು ಸಭೆಯ 5 ದಿನ ಮುಂಚಿತ ಪ್ರಭಾರ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತ ರೂಪದಲ್ಲಿ ಸಲ್ಲಿಸಿದರೆ ಮಾತ್ರ ಅಂತಹ ವಿಷಯಗಳ ಚರ್ಚೆಗೆ ಅವಕಾಶ ನೀಡಲಾಗುವುದು.

## ಸನ್ 2025-26 ನೇ ವಾರ್ಷಿಕ ವರದಿ

ಆದರನೀಯ ಸಹಕಾರಿ ಸದಸ್ಯ ಬಾಂಧವರೇ,

ವರದಿ ಅರ್ಪಿಸುವ ಪೂರ್ವ ವಿನಯಪೂರ್ವಕ ವಂದನೆಗಳು ಹಾಗೂ ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಗೆ ಆದರದ ಸ್ವಾಗತ. ಹಿರಿಯರು ಹಾಕಿಕೊಟ್ಟ ಆಚಾರ ವಿಚಾರ ಸನ್ಮಾರ್ಗದಲ್ಲಿ ಆಡಳಿತವನ್ನು ಮುಂದುವರೆಸಿ ಬ್ಯಾಂಕಿನ ಪ್ರಗತಿ ಸದಸ್ಯರ ವಿಶ್ವಾಸ ಅಭಾದಿತವಾಗುವಂತೆ ಬ್ಯಾಂಕಿನ ಎಲ್ಲ ನಿರ್ದೇಶಕರ, ಸಿಬ್ಬಂದಿಯವರ ಸದಸ್ಯರ ಗ್ರಾಹಕರ ಸ ಸಹಕಾರದೊಂದಿಗೆ ಬ್ಯಾಂಕು ಪ್ರಗತಿಪಥದಲ್ಲಿದೆ ಎಂದು ಹೇಳಲು ಅತೀವ ಆನಂದ ಹಾಗೂ ಹೆಮ್ಮೆಯಾಗುತ್ತಿದೆ ಇದಕ್ಕೆ ತಮ್ಮೆಲ್ಲರ ಅತ್ಯಮೂಲ್ಯ ಅಮೋಘ ಸಹಕಾರಕ್ಕೆ ಅನಂತ ಕೃತಜ್ಞತೆಗಳು.

ಬ್ಯಾಂಕು ವರದಿ ಸಾಲಿನಲ್ಲಿ ನಿಗದಿಪಡಿಸಿದ್ದ ಗುರಿ ಮತ್ತು ಯೋಜನೆಗಳಂತೆ ಕಾರ್ಯ ನಿರ್ವಹಿಸಿದ ಬಗ್ಗೆ ಅಂಕಿ ಅಂಶಗಳ ಬಗ್ಗೆ ಕಳುಹಿಸಿದ ವಾರ್ಷಿಕ ವರದಿಯನ್ನು ಈಗಾಗಲೇ ಅವಲೋಕಿಸಿದ್ದಿರೆಂದು ಭಾವಿಸುತ್ತೇನೆ. ದಿನಾಂಕ 31-03-2026 ಕ್ಕೆ ಅಂತ್ಯಗೊಂಡ ಲೆಕ್ಕ ಪತ್ರ, ವಾರ್ಷಿಕ ವರದಿ ಕಾರ್ಯನಿರ್ವಹಣಾ ವಿವರಗಳನ್ನು ಪರಿಶೀಲಿಸಿ ಸಭೆಯ ವಿಷಯಗಳಿಗೆ ನಿಮ್ಮ ಅನುಮೋದನೆ ನೀಡಬೇಕೆಂದು ಕೋರುತ್ತೇವೆ.

1. ದಿನಾಂಕ 30-08-2025 ರಂದು ಜರುಗಿದ ವಾರ್ಷಿಕ ಸರ್ವಸಾಧಾರಣ ಸಭೆಯ ನಡುವಳಿಕೆಗಳಿಗೆ ತಮ್ಮ ಅನುಮೋದನೆಯನ್ನು ದೃಡೀಕರಿಸುತ್ತೇವೆ.
2. ಬ್ಯಾಂಕಿನ 2025-26 ನೇ ಆರ್ಥಿಕ ವರ್ಷದ ಲೆಕ್ಕ ಪರಿಶೋಧಿತ ಲಾಭ ಹಾನಿ ಪತ್ರಿಕೆ, ಆಢಾವೆ ಪತ್ರಿಕೆ, ಮತ್ತು ವರದಿಗಳನ್ನು ಸಾದರಪಡಿಸಿದ್ದು ತಮ್ಮ ಅನುಮೋದನೆ ನೀಡಬೇಕು.

**ಠೇವುಗಳು :**

ವರ್ಷಾರಂಭದಲ್ಲಿ ಒಟ್ಟು ರೂ 94.50 ಕೋಟಿ ಠೇವುಗಳು ಇದ್ದು ಪ್ರಸಕ್ತ ಸಾಲಿನಲ್ಲಿ ರೂ 22.16 ಕೋಟಿ ಹೆಚ್ಚಾಗಿದ್ದು ದಿನಾಂಕ 31-03-2026 ಕ್ಕೆ ಬ್ಯಾಂಕಿನ ಒಟ್ಟು ಠೇವು ರೂ 116.66 ಕೋಟಿಗಳಷ್ಟಾಗಿದೆ. ಠೇವಿನ ಮೇಲಿನ ಬಡ್ಡಿಗೆ ಆದಾಯಕರ ಮೂಲದಲ್ಲೇ ಆದಾಯ ಕಡಿತದ ತೊಂದರೆ ಮಧ್ಯೆಯೂ ಠೇವುಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೆಚ್ಚಳವಾಗಿರುತ್ತದೆ. ಆದಾಯಕರ ಕಡಿತದ ಮಿತಿಯನ್ನು 50,000.00 ರೂ. ಹಾಗೂ ಹಿರಿಯ ನಾಗರಿಕರಿಗೆ 1,00,000/- ರೂ. ಗಳಿಗೆ ನಿಗದಿಪಡಿಸಲಾಗಿದೆ. ಠೇವುಗಳ ಮೇಲಿನ ಮುಂಗಡ ವಿಮೆಯನ್ನು ಸಮಯಕ್ಕೆ ಸರಿಯಾಗಿ ಸಂದಾಯ ಮಾಡುತ್ತಿದ್ದು ನಮ್ಮ ಬ್ಯಾಂಕಿನಲ್ಲಿ ತಮ್ಮ ಠೇವುಗಳು ಸುಭದ್ರವಾಗಿದ್ದ ಕಾರಣ ಸದಸ್ಯರು ಸಹ ಬ್ಯಾಂಕಿನಲ್ಲಿ ಠೇವುಗಳನ್ನಿಟ್ಟು ಸದಸ್ಯ ಠೇವುದಾರರ ಬ್ಯಾಂಕಿನಲ್ಲಿ ಪ್ರಮಾಣ ಹೆಚ್ಚಳವಾಗಲು ಸಹಕರಿಸಬೇಕೆಂದು ಆಶಿಸುತ್ತೇವೆ.

**ಸಾಲಗಳು :**

ಸದಸ್ಯರ ಹಿತಾಸಕ್ತಿ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ಉದ್ದೇಶಗಳಿಗೆ ಸ್ಪರ್ಧಾತ್ಮಕ ಬಡ್ಡಿದರಗಳಲ್ಲಿ ಸಾಲಗಳನ್ನು ವಿತರಿಸಿದ್ದು ವರ್ಷಾರಂಭದಲ್ಲಿ ಒಟ್ಟು ರೂ 58.90 ಕೋಟಿ ಸಾಲಗಳು ಇದ್ದು ಪ್ರಸಕ್ತ ಸಾಲಿನಲ್ಲಿ ರೂ 14.68 ಕೋಟಿ ಹೆಚ್ಚಾಗಿದ್ದು ದಿನಾಂಕ 31-03-2026 ಕ್ಕೆ ಬ್ಯಾಂಕಿನ ಒಟ್ಟು ಸಾಲ ರೂ 73.58 ಕೋಟಿಗಳಷ್ಟಾಗಿದೆ. ವರದಿ ಸಾಲಿನಲ್ಲಿ ವಿಶೇಷವಾಗಿ ಒಕ್ಕಲುತನ ಅಭಿವೃದ್ದಿಗಾಗಿ ರೈತ ಸದಸ್ಯ ಬಾಂಧವರಿಗೆ ಕಬ್ಬು ಕಟಾವು ಮಷಿನ್ ಮತ್ತು ಹಾರವೆಸ್ಟಿಂಗ ಮಷಿನ್ ಖರೀದಿಸಲು ಸಾಲ ವಿತರಿಸಲಾಗಿದೆ ರೈತ ಸದಸ್ಯ ಬಾಂಧವರು ಇದರ ಲಾಭ ಪಡೆಯಲು ವಿನಂತಿಸುತ್ತಾ ಸದಸ್ಯರು ಸಮಯಕ್ಕೆ ಸರಿಯಾಗಿ ಸಾಲ/ಬಡ್ಡಿ ಪಾವತಿ ಮಾಡಿ ಬ್ಯಾಂಕಿನ ಪ್ರಗತಿಗೆ ಸಹಕರಿಸಲು ವಿನಂತಿಸಲಾಗಿದೆ.

**ಸಾಲ ವಸೂಲಿ :**

ಸಾಲ ವಸೂಲಾತಿಯು ಬ್ಯಾಂಕಿನ ಬೆಳವಣಿಗೆಯ ಪ್ರಮುಖ ಅಂಶವಾಗಿದ್ದು ಅವಶ್ಯಕತೆಗೆ ಅನುಗುಣವಾಗಿ ಸಾಲ ಪಡೆದು ವಿನಿಯೋಗಿಸಿದಲ್ಲಿ ಮಾತ್ರ ಸಾಲ ಮರುಪಾವತಿಸಲು ಸಾದ್ಯ ಎಂಬುದನ್ನು ಸದಸ್ಯ ಬಾಂಧವರು ಮನಗಾಣಬೇಕು. ಸಾಲಕ್ಕೆ ಜಾಮೀನು ಹಾಕುತ್ತಿರುವ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತು ಸಹಿ ಮಾಡಬೇಕು.

**ಅನುತ್ಪಾದಕ ಸಾಲಗಳು (NPA):**

ವರದಿ ವರ್ಷದಲ್ಲಿ ಅನುತ್ಪಾದಕ ಸಾಲಗಳು ಹೆಚ್ಚಳವಾಗುತ್ತಿರುವದು ಕಳವಳಕಾರಿ ವಿಷಯವಾಗಿದೆ. ದಿನಾಂಕ 31-03-2026 ಕ್ಕೆ ಬರತಕ್ಕ ಅನುತ್ಪಾದಕ ಒಟ್ಟು ಸಾಲ ರೂ 310.41 ಲಕ್ಷ (4.22%) ಮತ್ತು ನಿವ್ವಳ ಅನುತ್ಪಾದಕ ಸಾಲ 82.50 ಲಕ್ಷ (1.49%) ಇರುತ್ತದೆ.

**ಹೂಡಿಕೆಗಳು :**

ಭಾರತೀಯ ರಿಝರ್ವ ಬ್ಯಾಂಕಿನ ಹೂಡಿಕೆಯ ನಿಯಮಾವಳಿಗಳಂತೆ ಎಸ್.ಎಲ್.ಆರ್ ಹೂಡಿಕೆಗಳನ್ನು ಸರಕಾರಿ ಭದ್ರತಾ ಪತ್ರಗಳಲ್ಲಿ ಮಾಡಲಾಗಿದ್ದು ಹಾಗೂ ಇತರ ಬ್ಯಾಂಕುಗಳಲ್ಲಿ ಭಾರತೀಯ ರಿಝರ್ವ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಲಾಭದಾಯಕವಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಮಾಡಲಾಗಿದೆ. ವರದಿಯ ಸಾಲಿನಲ್ಲಿ ಒಟ್ಟು ಹೂಡಿಕೆಗಳ ಮೊತ್ತ ರೂ 45.57 ಕೋಟಿಗಳಾಗಿವೆ.

3. **ಲೆಕ್ಕ ಪರಿಶೋಧನೆ. :** ಶಾಸನ ಬದ್ಧ ಲೆಕ್ಕ ಪರಿಶೋಧಕರು ಅಂತಿಮ ಲೆಕ್ಕ ಪರಿಶೋಧನಾ ವರದಿ ನೀಡಿರುತ್ತಾರೆ. ವರದಿಯಲ್ಲಿ ಅವರು ಸೂಚಿಸಿರುವ ನ್ಯೂನ್ಯತೆಗಳಿಗೆ ಅನುಪಾಲನಾ ವರದಿ ತಯಾರಿಸಿ ಸಭೆಯಲ್ಲಿ ಮಂಡಿಸಲಾಗುವುದು. ಅವರು ಸೂಚಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಗಿದ್ದು, ತಮ್ಮೆಲ್ಲರ ಸಹಕಾರ ಅತ್ಯಗತ್ಯವಾಗಿದೆ. ಹಾಗೂ ಬ್ಯಾಂಕಿನ ಉತ್ತಮ ಕಾರ್ಯನಿರ್ವಹಣೆಗೆ ಸಹಕಾರಿಯಾಗುತ್ತದೆ. ಕಾರಣ ತಮಗೆ ಸೂಚಿಸಲಾಗುವ ಅವಶ್ಯಕ ದಾಖಲೆ ನೀಡಿ, ಲೆಕ್ಕ ಪರಿಶೋಧಕರ ಸಲಹೆ ಸೂಚನೆಗಳನ್ನು ಪರಿಪಾಲಿಸಲು ಸಹಕಾರಿಯಾಗುತ್ತದೆ. ತಪ್ಪಿದಲ್ಲಿ ಅನಿವಾರ್ಯವಾಗಿ ಕಾನೂನಾತ್ಮಕ ಕ್ರಮಗಳನ್ನಿಡಬೇಕಾಗುತ್ತದೆ. ಕಾರಣ ಸಹಕರಿಸಬೇಕಾಗಿ ವಿನಂತಿ.

4. **ನಿವ್ವಳ ಲಾಭ ವಿಂಗಡಣೆ :** ನಿಧಿಗಳ ಅಚ್ಚುಕಟ್ಟಾದ ಗುಂತಾವಣೆ, ಬಡ್ಡಿ ವಸೂಲಾತಿ, ಸುಸ್ತಿಸಾಲಗಳ ವಸೂಲಾತಿ ಮತ್ತು ಉತ್ತಮ ಕಾರ್ಯನಿರ್ವಹಣೆಯ ಫಲವಾಗಿ ಹಾಗೂ ವೆಚ್ಚಗಳ ಕಡಿವಾಣದಿಂದ ಬ್ಯಾಂಕು ಈ ವರ್ಷವೂ ಕೂಡ ರೂ 100.79 ಲಕ್ಷ ಲಾಭಗಳಿಸಿದೆ.

ವರದಿ ವರ್ಷದ ಒಟ್ಟು ನಿವ್ವಳ ಲಾಭ ರೂ 100,78,912.00 ಈ ಕೆಳಗಿನಂತೆ ವಿಂಗಡಣೆ ಮಾಡಲು ಮಂಡಳಿ ನಿರ್ಧರಿಸಿದ್ದು ಅದಕ್ಕೆ ತಮ್ಮ ಅನುಮೋದನೆ ನೀಡಿ ಸಹಕರಿಸಬೇಕಾಗಿ ವಿನಂತಿ.

| ಅನಂ | ವಿವರಣೆ | ಪ್ರ.ಶ. | ಮೊತ್ತ ರೂ |
|---|---|---|---|
| 1. | ಕಾಯಿದ್ದಿಟ್ಟ ನಿಧಿಗೆ | 40% | 40,31,565.00 |
| 2. | ಸಹಕಾರ ಶಿಕ್ಷಣ ನಿಧಿಗೆ | 2% | 1,20,947.00 |
| 3. | ರಾಜ್ಯ ಸಹಕಾರ ಮಹಾಮಂಡಳಕ್ಕೆ | 1% | 59,264.00 |
| 4. | ಕರಡು ಸಾಲ ನಿಧಿಗೆ | 10% | 5,92,640.00 |
| 5. | ಕಟ್ಟಡ ನಿಧಿಗೆ | 15% | 8,88,960.00 |
| 6. | ಸದಸ್ಯರ ಕ್ಷೇಮ ನಿಧಿಗೆ | 10% | 5,92,640.00 |
| 7. | ಸಿಬ್ಬಂದಿ ಕ್ಷೇಮ ನಿಧಿಗೆ | 2% | 1,18,528.00 |
| 8. | ಸದಸ್ಯರ ಮರಣ ನಿಧಿಗೆ | 2% | 1,18,528.00 |
| 9. | ಧರ್ಮಾರ್ಥ ನಿಧಿಗೆ | 1% | 59,264.00 |
| 10. | ಶತಮಾನೋತ್ಸವ ನಿಧಿಗೆ | 10% | 5,92,640.00 |
| 11. | ಸದಸ್ಯರಿಗೆ ಲಾಭಾಂಶ | 12% | 29,03,936.00 |
| | **ಒಟ್ಟು** | | **100,78,912.00** |

5. 2026-27 ನೇ ಸಾಲಿಗಾಗಿ ಕೆಳಗಿನ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿದ್ದು ಪರಿಶೀಲಿಸಿ ಅನುಮೋದನೆ ನೀಡಬೇಕು.
   ಎನ್.ಪಿ.ಎ ವಸೂಲಾತಿಗೆ ಪ್ರಥಮ ಆದ್ಯತೆ ನೀಡಿ ಕಾರ್ಯಯೋಜನೆ ರೂಪಿಸಿ ಪ್ರತಿಶತ 3 ರ ಒಳಗೆ ತರಲು ಅಗತ್ಯ ಕ್ರಮವಿಡುವುದು.
   ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಶೀಘ್ರ ಸೇವೆ ಸಲ್ಲಿಸಲು ಕ್ರಮವಿಡುವುದು. (ಎ.ಟಿ.ಎಮ್, ಐಎಂಪಿಎಸ್, ಮೊಬೈಲ್ ಬ್ಯಾಂಕ , ಯುಪಿಆಯ್ ಸೇವೆಗಳನ್ನು ಅಳವಡಿಸುವದು).
   ಬ್ಯಾಂಕಿನ ಠೇವಣಿಗಳನ್ನು 150 ಕೋಟಿಗೆ ಹೆಚ್ಚಿಸುವುದು.
   ಇವುಗಳಿಗೆ ತಮ್ಮ ಅನುಮೋದನೆ ನೀಡಲು ವಿನಂತಿ.
6. ಪುಟ ನಂ 14 ರಲ್ಲಿ ನೀಡಲಾದ 2026-27 ನೇ ಸಾಲಿಗೆ ತಯಾರಿಸಲಾದ ಅಂದಾಜು ಪತ್ರಿಕೆ ಪರಿಶೀಲಿಸಿ ಅನುಮೋದಿಸಬೇಕೆಂದು ವಿನಂತಿ. ಮತ್ತು ಪುಟ ನಂ 14 ರಲ್ಲಿ ತೋರಿಸಲಾದ ಹೆಚ್ಚುವರಿ ವೆಚ್ಚಗಳಿಗೆ ತಮ್ಮ ಅನುಮೋದನೆ ನೀಡಬೇಕಾಗಿ ವಿನಂತಿ.
7 ಸನ್ 2026-27ನೇ ಸಾಲಿನ ಶಾಸನಬದ್ದ ಲೆಕ್ಕ ಪರಿಶೋಧನೆ ಕೈಗೊಳ್ಳಲು ಆಡಳಿತ ಮಂಡಳಿ ಶಿಫಾರಸು ಮಾಡಿದ ಲೆಕ್ಕ ಪರಿಶೋಧಕರ ಹೆಸರನ್ನು ಆರ್.ಬಿ.ಆಯ್. ಅನುಮತಿಗೆ ಕಳುಹಿಸಲಾಗಿದೆ ಅವಗಾಹಣೆಗಾಗಿ ಮಂಡಿಸಲಾಗಿದೆ.
8. ವರ್ಷಾರಂಭಕ್ಕೆ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 5215 ಇದ್ದು ವರದಿ ವರ್ಷದಲ್ಲಿ 217 ಜನರಿಗೆ ಸದಸ್ಯತ್ವ ನೀಡಲಾಗಿದೆ. ಮರಣ, ರಾಜೀನಾಮೆ ಇತ್ಯಾದಿಗಳಿಂದ 66 ಜನ ಸದಸ್ಯರು ಕಡಿಮೆ ಆಗಿದ್ದು ವರ್ಷಾಂತ್ಯಕ್ಕೆ ಒಟ್ಟು 5366 ಜನ ಸದಸ್ಯರಿದ್ದು ಅದಕ್ಕೆ ತಮ್ಮ ಅನುಮೋದನೆ ಕೋರಲಾಗಿದೆ.
9. ವರದಿ ವರ್ಷದಲ್ಲಿ ಬ್ಯಾಂಕಿನ ನಿರ್ದೇಶಕರು ನಿಯಮಬಾಹ್ಯ ಯಾವುದೇ ಸೇವೆಗಳನ್ನು ಬಳಕೆ ಮಾಡಿಕೊಂಡ ನಿದರ್ಶನಗಳು ವರದಿಯಾಗಿಲ್ಲ. ಸದಸ್ಯರಿಗೆ ಸದಸ್ಯರ ಕ್ಷೇಮನಿಧಿ ಮತ್ತು ಮರಣ ನಿಧಿ, ನೇರ RTGS/NEFT Host to Host, CTS ಸೌಲಭ್ಯ ಅಲ್ಲದೇ ಬ್ಯಾಂಕಿನಿಂದ ಸಾಧ್ಯವಿರುವ ಕಾಲಕಾಲಕ್ಕೆ ಅವಶ್ಯವಿರುವ ಸೇವಾ ಸೌಲಭ್ಯಗಳನ್ನು ನೀಡುವ ಪ್ರಯತ್ನವನ್ನು ಮಾಡಲಾಗುತ್ತಿದೆ.
10. ವರದಿ ವರ್ಷದಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿ ಸದಸ್ಯರ ಮತ್ತು ಬ್ಯಾಂಕಿನ ಕಾರ್ಯನಿರ್ವಾಹಕರ ಯಾವುದೇ ಸಂಬಂಧಿಕರನ್ನು ಬ್ಯಾಂಕಿನ ಸೇವೆಗೆ ನೇಮಕ ಮಾಡಿಕೊಂಡಿರುವದಿಲ್ಲ.
11. ವರದಿ ವರ್ಷದಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಸಂಬಂಧಿಕರಿಗೆ ಕಾನೂನು ನಿರ್ಬಂಧಿತ ಯಾವುದೇ ಸಾಲ ನೀಡಿರುವದಿಲ್ಲ, ಕಾರಣ ಅವರಿಂದ ಬರತಕ್ಕ ಸಾಲ ಸುಸ್ತಿ ಬಾಕಿ ಇರುವದಿಲ್ಲ.
12. ಸದಸ್ಯರಿಂದ ಮಂಡಳಿ ಕಾರ್ಯನಿರ್ವಹಣೆಯ ಬಗ್ಗೆ ಯಾವುದೇ ತರಹದ ದೂರುಗಳು ಬಂದಿರುವುದಿಲ್ಲ.
13. ವರದಿ ವರ್ಷದಲ್ಲಿ ಯಾವುದೇ ವಿಚಾರಣೆಗಳು ಮತ್ತು ಪರಿವೀಕ್ಷಣೆಗಳು ನಡೆದಿರುವುದಿಲ್ಲ.
14. ಪುಟ ಸಂಖ್ಯೆ 21 ರಿಂದ 29 ವರೆಗೆ ನಮೂದಿಸಲಾದ ಉಪವಿಧಿಗಳ ಬಗ್ಗೆ ಮಂಜೂರು ನೀಡಲು ಅನುಮೋದನೆ ಕೋರಲಾಗಿದೆ.
15. ಸದಸ್ಯರಿಂದ ಯಾವುದೇ ಸಲಹೆ ಸೂಚನೆ ಬಂದಲ್ಲಿ ಸಭಾಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಿ ಅನುಮೋದಿಸಬಹುದಾಗಿದೆ.

## ★ ಬ್ಯಾಂಕಿನ ಕಾರ್ಯನಿರ್ವಹಣೆಯ ವಿವರಗಳು ★

ಭಾರತೀಯ ಬ್ಯಾಂಕಿಂಗ್ ಉದ್ಯಮವು ಅತ್ಯಂತ ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ ಸಹ ನಮ್ಮ ಬ್ಯಾಂಕ್ ಪ್ರಗತಿಯತ್ತ ಸಾಗುವಲ್ಲಿ ಮುನ್ನಡೆದಿದೆ. ಸಹಕಾರ ಕ್ಷೇತ್ರದ ಶಾಶ್ವತ ಮೌಲ್ಯಗಳನ್ನು ಉಳಿಸಿ ಬೆಳೆಸುವ ಜೊತೆಯಲ್ಲಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಿತ್ಯ ಪರಿಷ್ಕರಣೆಗೊಳ್ಳುವ ತಾಂತ್ರಿಕ ಜಗತ್ತಿನ ಹೊಳಪನ್ನು ರೂಪಿಸಿಕೊಂಡು ಅಳವಡಿಸಿಕೊಳ್ಳಬೇಕಾದ ಸವಾಲಿನ ಮಧ್ಯೆ ನಾವು ಕಾರ್ಯನಿರ್ವಹಿಸಬೇಕಾಗಿದೆ. ಇಂದಿನವರೆಗೂ ಇದರಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದೇವೆ ಎಂದರೆ ಅದಕ್ಕೆ ನಿಮ್ಮೆಲ್ಲರ ಸಹಕಾರ ಬೆಂಬಲವೇ ಕಾರಣ.

1. **ಆಡಳಿತ ನಿರ್ವಹಣೆ :** ಬ್ಯಾಂಕಿನ ಪ್ರಗತಿಗೆ ಪೂರಕವಾದ ಮತ್ತು ಅವಶ್ಯವಿರುವ ವಿಷಯಗಳನ್ನು ಚರ್ಚಿಸಿ ಆಡಳಿತ ನಿರ್ವಹಿಸಲು ವರದಿ ವರ್ಷದಲ್ಲಿ 02 ಲೆಕ್ಕ ಪರಿಶೋಧನಾ ಸಮಿತಿ ಸಭೆ 10 ಕಾರ್ಯನಿರ್ವಾಹಕ ಸಭೆ, 01 ಗುಂತಾವಣೆ ಸಮಿತಿ ಸಭೆ ಹಾಗೂ 01 ವಾರ್ಷಿಕ ಸಾಮಾನ್ಯ ಸಭೆಗಳಲ್ಲದೆ, 12 ನಿರ್ದೇಶಕರ ಮಂಡಳಿ ಸಭೆಗಳನ್ನು ಜರುಗಿಸಲಾಗಿದೆ.

   ಕಾಲಕಾಲಕ್ಕೆ ಸಿಬ್ಬಂದಿಯವರ ಹಾಗೂ ಶಾಖಾಧಿಕಾರಿಗಳ ಸಭೆ ನಡೆಸಿ ಬ್ಯಾಂಕಿನ ಉತ್ತಮ ಕಾರ್ಯನಿರ್ವಹಣೆಗೆ ಅವಶ್ಯವಿರುವ ಸಲಹೆ, ಸೂಚನೆ ನೀಡಲಾಗಿದೆ. ಹಾಗೂ ಸಿಬ್ಬಂದಿಯವರಿಗೆ ಅವಶ್ಯವಿರುವ ಮಾರ್ಗದರ್ಶನ, ತರಬೇತಿ ಹಾಗೂ ಕಾಲಕಾಲಕ್ಕೆ ಸುತ್ತೋಲೆಗಳನ್ನು ನೀಡಿ ಬ್ಯಾಂಕಿನ ಪ್ರಗತಿಗೆ ಅವಶ್ಯವಿರುವ ಹಾಗೂ ಪೂರಕವಾದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

2. **ಅಡಿಟ ವರ್ಗೀಕರಣ :** 2025-26 ನೇ ಸಾಲಿನಲ್ಲಿ ಲೆಕ್ಕ ಪರಿಶೋಧನೆಯನ್ನು ಮೆ|| ಹೆಗಡೆ ಗಿರಿ ಆ್ಯಂಡ ಅಸೋಸಿಯೆಟ್ಸ್ ಬೆಂಗಳೂರು ಇವರು ಮಾಡಿರುತ್ತಾರೆ. ಪ್ರತಿ ಸಲದಂತೆ ಈ ವರ್ಷವು ಕೂಡ ಅಡಿಟ ವರ್ಗೀಕರಣ **'ಅ'** ಇರುತ್ತದೆ. ಅಂತಾ ಹೇಳಲು ಹೆಮ್ಮೆ ಎನಿಸುತ್ತದೆ.

3. **ಬ್ಯಾಂಕಿನ ಶಾಖೆಗಳು :** ಸಂಕೇಶ್ವರ ಪಟ್ಟಣದ ಶಾಖೆ ಮತ್ತು ಬೆಳಗಾವಿಯ ಪೀರನವಾಡಿಯ ಶಾಖೆಯು ಪ್ರಗತಿಯತ್ತ ಸಾಗಿವೆ. ಎಪ್ರಿಲ್ 27-2024 ರಂದು ಕಿತ್ತೂರ ಹಾಗೂ ಬಿ.ಕೆ. ಕಂಗ್ರಾಳಿ (ಬೆಳಗಾವಿ) ಯಲ್ಲಿ ಎರಡು ಶಾಖೆಗಳನ್ನು ಪ್ರಾರಂಭಿಸಲಾಗಿದೆ ಮತ್ತು 5-12-2024 ರಂದು ಮೂಡಲಗಿ ಪಟ್ಟಣದಲ್ಲಿ ಒಂದು ಶಾಖೆಯನ್ನು ಪ್ರಾರಂಭಿಸಲಾಗಿದೆ. ನೂತನವಾಗಿ ಪ್ರಾರಭವಾದ ಮೂರು ಶಾಖೆಗಳು ಪ್ರಗತಿ ಹೊಂದುತ್ತಿವೆ.

4. **ಆಧುನಿಕ ಬ್ಯಾಂಕಿಂಗ್ ಸೇವೆಗಳು :** ಬ್ಯಾಂಕಿನ ಗ್ರಾಹಕರಿಗೆ ತ್ವರಿತ ಹಣ ವರ್ಗಾವಣೆ ಮಾಡಲು AXIS ಬ್ಯಾಂಕ್ ಮತ್ತು HDFC ಬ್ಯಾಂಕ ಸಹಯೋಗದೊಂದಿಗೆ ಆರ್.ಟಿ.ಜಿ.ಎಸ್ ಹಾಗೂ ಎನ್.ಇ.ಎಫ್.ಟಿ. ಮತ್ತು Host to Host ಸೇವೆ ಒದಗಿಸಲಾಗಿದೆ. ಮಾನ್ಯ ಸದಸ್ಯರು ಈ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಮುಂಬರುವ ದಿನಗಳಲ್ಲಿ ಎಟಿಎಮ್. ಸೇವೆ ಹಾಗೂ ಮೊಬೈಲ ಬ್ಯಾಂಕಿಂಗ, Phonepe ಸೌಲಭ್ಯಗಳನ್ನು ಒದಗಿಸಲಾಗುವುದು.

5. **ಸಾಮಾಜಿಕ ಹಾಗೂ ಇತರೇ ಚಟುವಟಿಕೆಗಳು :** ಪ್ರತಿ ವರ್ಷದಂತೆ ಬ್ಯಾಂಕು ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಧನ ನೀಡುತ್ತಾ ಬಂದಿದ್ದು, ಬ್ಯಾಂಕಿನ ಈ ಕಾರ್ಯವಿಧಾನವು ತುಂಬಾ ಅನುಕರಣೀಯ ಹಾಗೂ ಪ್ರಶಂಸನೀಯವಾದುದು.

★ **ಸೂಚನೆ : SSLC, PUC ಹಾಗೂ ಪದವಿ ಪರೀಕ್ಷೆಯಲ್ಲಿ 90% ಹಾಗೂ ಹೆಚ್ಚಿನ ಅಂಕ ಪಡೆದ ಸದಸ್ಯರ ಮಕ್ಕಳಿಗೆ ವಾರ್ಷಿಕ ಮಹಾಸಭೆಯಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಕಾರಣ ಸದಸ್ಯ ಬಾಂಧವರು ಅರ್ಹ ಮಕ್ಕಳ ಅಂಕಪಟ್ಟಿಯ ಝೇರಾಕ್ಸ್ ಪ್ರತಿಯನ್ನು ದಿ. 25-08-2026 ರ ಒಳಗಾಗಿ ಬ್ಯಾಂಕಿಗೆ ಪೂರೈಸಿ ಸಹಕರಿಸಬೇಕಾಗಿ ವಿನಂತಿ.**

**★ ಸಹವೇದನೆ ★**

ವರದಿ ವರ್ಷದಲ್ಲಿ ಬ್ಯಾಂಕಿನ ಅನೇಕ ಸದಸ್ಯರು, ಗ್ರಾಹಕರು, ಗಣ್ಯರು ನಿಧನರಾಗಿರುತ್ತಾರೆ. ಹಾಗೂ ಅನೇಕ ಯೋಧರು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿರುತ್ತಾರೆ. ಅವರ ಆತ್ಮಕ್ಕೆ ಚಿರಶಾಂತಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸಹವೇದನೆಯನ್ನು ಕೋರುತ್ತೇವೆ. ದಿನಾಂಕ 11-04-2026 ರಂದು ಶ್ರೀ. ಚನಗೌಡಾ ಬಸಗೌಡಾ ಪಾಟೀಲ ಸಾ|| ಬಸ್ತವಾಡ ಇವರು ನಿಧನ ಹೊಂದಿದ್ದು ಅವರು ಬ್ಯಾಂಕಿನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕ ಹುದ್ದೆಗಳಲ್ಲಿ 52ವರ್ಷಗಳ ಸುಧೀರ್ಘ ಸೇವೆಸಲ್ಲಿಸಿ ಬ್ಯಾಂಕಿನ ಏಳಿಗೆಗೆ ಕಾರಣಿಭೂತರಾಗಿದ್ದಾರೆ, ಅವರ ಆತ್ಮಕ್ಕೆ ಚಿರಶಾಂತಿ ಹಾಗೂ ಸಹವೇದನೆಯನ್ನು ಕೋರುತ್ತೇವೆ

## ★ ಕೃತಜ್ಞತೆಗಳು ಮತ್ತು ಅಭಿನಂದನೆಗಳು ★

ಬ್ಯಾಂಕಿನ ಸರ್ವತೋಮುಖ ಅಭಿವೃದ್ದಿಗಾಗಿ ನಿರ್ದೇಶಕ ಮಂಡಳಿಯ ಸದಸ್ಯರುಗಳು ನಿಸ್ವಾರ್ಥತೆಯಿಂದ ಶ್ರಮಪಡುತ್ತಿದ್ದು ಇನ್ನು ಮುಂದೆಯೂ ಸಹ ಇದೇ ರೀತಿ ಪ್ರೋತ್ಸಾಹ, ಸಹಕಾರ ಬೆಂಬಲವನ್ನು ನೀಡುತ್ತಾರೆಂದು ಆಶಿಸುತ್ತಾ ಅವರೆಲ್ಲರಿಗೆ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಪ್ರಗತಿಗೆ ಕಾಲಕಾಲಕ್ಕೆ ಮಾರ್ಗದರ್ಶನ ನೀಡುತ್ತಿರುವ ರಿಝರ್ವ ಬ್ಯಾಂಕಿನ ಅಧಿಕಾರಿಗಳಿಗೆ ಮಹಾಮಂಡಳದ ಸಲಹೆಗಾರರಾದ ಶ್ರೀ ಸುಧಾಕರ ಭಟ್ ಅವರಿಗೆ ಸಹಕಾರಿ ಇಲಾಖೆಯ ಸಂಯುಕ್ತ ನಿಬಂಧಕರು ಉಪನಿಬಂಧಕರು ಹಾಗೂ ಸಹಾಯಕ ನಿಬಂಧಕರು ಬೆಂಗಳೂರು ಹಾಗೂ ಬೆಳಗಾವಿ ವಿಭಾಗ, ಉಪನಿರ್ದೇಶಕರು ಲೆಕ್ಕ ಪರಿಶೋಧನಾ ವಿಭಾಗ ಬೆಳಗಾವಿ, ಸಹಕಾರಿ ಅಭಿವೃದ್ಧಿ ಅಧಿಕಾರಿ ಹುಕ್ಕೇರಿ, ಇವರಿಗೆಲ್ಲಾ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವರದಿ ವರ್ಷದಲ್ಲಿ ಶಾಸನಬದ್ದ ಲೆಕ್ಕಪರಿಶೋಧನೆಯನ್ನು ಕೈಗೊಂಡು ಮಾರ್ಗದರ್ಶನ ಮಾಡಿದ ಮೆ|| ಹೆಗಡೆ ಗಿರಿ ಆ್ಯಂಡ ಅಸೋಸಿಯೆಟ್ಸ್, ಬೆಂಗಳೂರು ಇವರಿಗೆ ಸಾಲ ವಸೂಲಾತಿಗೆ ಸಹಕಾರ ನೀಡುತ್ತಿರುವ ಸಹಕಾರಿ ಸಂಘಗಳ ಸಂಯುಕ್ತ ಮತ್ತು ಸಹಕಾರ ನಿಬಂಧಕರು ಹಾಗೂ ಕಚೇರಿ ಸಿಬ್ಬಂದಿಗೆ, ಸಮವರ್ತಿ ಲೆಕ್ಕಪರಿಶೋಧಕರು ಮೆ|| ನಿಶು ಯು. ಪಟಗೆ ಬೆಳಗಾವಿ ಇವರಿಗೆ, ಎಲ್ಲ ಕಾನೂನು ಸಲಹೆಗಾರರಿಗೆ, ಬ್ಯಾಂಕಿನ ಎಲ್ಲ ನ್ಯಾಯವಾದಿಗಳಿಗೆ, ಆಸ್ತಿ ಮೌಲ್ಯ ಮಾಪಕರಿಗೆ, ಬ್ಯಾಂಕಿನ ಅಭಿವೃದ್ಧಿಗೆ ಕೈ ಜೋಡಿಸುತ್ತಿರುವ ಬ್ಯಾಂಕಿನ ಶಾಖಾ ಸಲಹಾ ಸಮಿತಿ ಸದಸ್ಯರಿಗೂ ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ಬ್ಯಾಂಕಿನ ವ್ಯವಹಾರಗಳನ್ನು ಸುಗಮಗೊಳಿಸಲು ಸಲಹೆಗಾರರಾಗಿ ಬಂದು ಸಾಲ ವಸೂಲಾತಿಗಾಗಿ ಸಹಕರಿಸಿದ ನಿವೃತ್ತ ವ್ಯವಸ್ಥಾಪಕ ಸಿಬ್ಬಂದಿಗಳಾದ ಶ್ರೀ. ಆರ್. ಸಿ. ಪಟ್ಟಣಶೆಟ್ಟಿ, ಶ್ರೀ. ಬಿ.ಆಯ್. ಬೆನವಾಡಿ ಇವರಿಗೂ ಸಹ ನಿರ್ದೇಶಕ ಮಂಡಳಿ ಹಾಗೂ ಸಿಬ್ಬಂದಿ ಪರವಾಗಿ ಸವಿನಯ ಕೃತಜ್ಞತೆಗಳು.

ನಮ್ಮ ಬ್ಯಾಂಕಿಗೆ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (CBS) ಅಳವಡಿಸಿ ಗ್ರಾಹಕರ ಸೇವೆಗೆ ಅನುಕೂಲ ಮಾಡಿಕೊಟ್ಟಿರುವ ನೆಟವಿನ್ ಸಾಪ್ಟವೇರ್ ಕಂಪನಿ ನಾಶಿಕ ಇವರಿಗೆ ನಮ್ಮ ನಿಮ್ಮೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಪ್ರಗತಿಗೆ ಮತ್ತು ಶ್ರೇಯಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣೀಭೂತರಾದ ಎಲ್ಲಾ ಸಂಘ ಸಂಸ್ಥೆಗಳಿಗೂ ಹಾಗೂ ಸೌಹಾರ್ದ ಸಹಕಾರಿಗಳ ಪಧಾಧಿಕಾರಿಗಳಿಗೂ, ಸಿಬ್ಬಂದಿ ವರ್ಗದವರಿಗೂ ತುಂಬು ಹೃದಯದ ಅಭಿನಂದನೆಗಳು.

ಸದಸ್ಯರು ಮತ್ತು ಠೇವಣಿದಾರರು ಬ್ಯಾಂಕಿನ ಬೆನ್ನೆಲಬು ಆಗಿರುತ್ತಾರೆ. ಬ್ಯಾಂಕಿನ ಸರ್ವಾಂಗೀಣ ಪ್ರಗತಿಗೆ ಕಾರಣರಾದ ಎಲ್ಲಾ ಸದಸ್ಯರಿಗೆ ಮತ್ತು ಬ್ಯಾಂಕಿನ ಮೇಲೆ ವಿಶ್ವಾಸವಿಟ್ಟು ತಮ್ಮ ಠೇವಣಿಗಳನ್ನು ತೊಡಗಿಸಿದ ಎಲ್ಲಾ ಠೇವಣಿದಾರರಿಗೆ ಹಾಗೂ ಗ್ರಾಹಕರಿಗೆ ಹೃದಯಪೂರ್ವಕ ಕೃತಜ್ಞತೆಗಳು. ಬ್ಯಾಂಕಿನ ಉತ್ಸಾಹಿ ಹಾಗೂ ಸಮರ್ಥ ಆಡಳಿತ ಮಂಡಳಿಯ ಅರ್ಪಣಾ ಮನೋಭಾವದಿಂದ ಕೆಲಸ ಮಾಡುತ್ತಿರುವ ಪ್ರಯತ್ನದ ಫಲವಾಗಿ ಬ್ಯಾಂಕು ಉತ್ತಮ ಪ್ರಗತಿಯನ್ನು ಸಾಧಿಸಿದೆ. ಕಾರಣ ಅವರಿಗೆ ನನ್ನ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ, ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಸೇವೆಯ ಮೂಲಕ ಗ್ರಾಹಕರ ಮನಗೆದ್ದಿರುವ ನಮ್ಮ ಉತ್ಸಾಹಿ ಸಿಬ್ಬಂದಿ ಅಭಿನಂದನಾರ್ಹರೆ ಆಗಿದ್ದಾರೆ. ಬ್ಯಾಂಕಿನ ದಿನನಿತ್ಯದ ವ್ಯವಹಾರಗಳಲ್ಲಿ ನಮ್ಮ ಬ್ಯಾಂಕಿನ ಸಿಬ್ಬಂದಿ ವರ್ಗದೊಡನೆ ಸಹಕರಿಸುತ್ತಿರುವ ಸ್ಥಳಿಯ ಬ್ಯಾಂಕುಗಳಿಗೆ ಅಭಿನಂದನೆಗಳು. ಬ್ಯಾಂಕಿನ ಈ ಎಲ್ಲ ಸಾಧನೆಗಳಿಗೆ ಗ್ರಾಹಕರ ಮತ್ತು ಶೇರುದಾರರ ಹಾಗೂ ಠೇವಣಿದಾರರ ವಿಶ್ವಾಸ ನಿರಂತರ ಸಹಕಾರ ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ನಿಷ್ಠಾಪೂರ್ಣ ಕರ್ತವ್ಯ ನಿರ್ವಹಣೆಯೇ ಕಾರಣ. ಕೊನೆಯದಾಗಿ ತಮ್ಮೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ ನಮ್ಮ ಬ್ಯಾಂಕು ಇನ್ನು ಹೆಚ್ಚಿನ ಅಭಿವೃದ್ಧಿ ಹೊಂದಲಿ ಎಂದು ಆಶಿಸಿ ವಿನಯಪೂರ್ವಕವಾಗಿ ವಂದಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.

ಆಡಳಿತ ಮಂಡಳಿಯ ಪರವಾಗಿ
**ಚಂದ್ರಶೇಖರ ಮಲಗೌಡಾ ಪಾಟೀಲ**
ಅಧ್ಯಕ್ಷರು

# ದಿ ಹುಕ್ಕೇರಿ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ., ಹುಕ್ಕೇರಿ

## ಪ್ರಗತಿ ನೋಟ

| ಅ.ನಂ | ವಿವರ | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 | 2024-25 | 2025-26 |
|---|---|---|---|---|---|---|---|---|---|---|---|
| 1 | ಸದಸ್ಯರ ಸಂಖ್ಯೆ | 4160 | 4408 | 4456 | 4982 | 4990 | 4959 | 4990 | 5014 | 5215 | 5366 |
| 2 | ಶೇಅರು | 73.27 | 100.30 | 126.16 | 144.17 | 160.04 | 172.68 | 190.12 | 209.90 | 241.46 | 262.50 |
| 3 | ನಿಧಿಗಳು | 232.41 | 255.33 | 286.75 | 328.18 | 440.63 | 502.41 | 594.01 | 660.77 | 732.00 | 768.65 |
| 4 | ಠೇವುಗಳು | 3114.11 | 3829.83 | 4444.57 | 5208.90 | 5902.04 | 6123.85 | 7079.05 | 7901.36 | 9450.68 | 11666.21 |
| 5 | ಸಾಲ ವಿತರಿಸಿದ್ದು | 1604.57 | 2319.47 | 2701.28 | 2770.33 | 3152.50 | 3428.38 | 3937.79 | 4432.04 | 5889.80 | 7357.56 |
| 6 | ದುಡಿಯುವ ಬಂಡವಾಳ | 3558.81 | 4361.74 | 5070.25 | 5917.38 | 6774.92 | 7127.65 | 8205.59 | 9148.99 | 10853.83 | 13235.85 |
| 7 | ಡಿವಿಡೆಂಡ್ ಪ್ರತಿಶತ | 12% | 12% | 12% | Nil | 12% | 15% | 15% | 14% | 13% | 12% |
| 8 | ನಿವ್ವಳ ಲಾಭ | 21.86 | 30.46 | 40.76 | 45.79 | 66.57 | 100.83 | 101.09 | 100.32 | 87.25 | 100.79 |
| 9 | ಅಡಿಟ್ ವರ್ಗ | ಎ | ಎ | ಎ | ಎ | ಎ | ಎ | ಎ | ಎ | ಎ | ಎ |

## ಲಾಭ ಹಾನಿ ಪತ್ರಿಕೆ 2025-26

(₹ ಗಳಲ್ಲಿ)

| | ವೆಚ್ಚಗಳು | 31/03/2026 | 31/03/2025 |
|---|---|---|---|
| 1. | ಠೇವು ಹಾಗೂ ಸಾಲಗಳ ಮೇಲಿನ ಬಡ್ಡಿ | 7,69,08,714.00 | 5,79,44,866.00 |
| 2. | ಕಮೀಶನ್ | 39,685.15 | 32,391.61 |
| 3. | ಸಂಬಳ, ಭತ್ಯೆ ಮತ್ತು ಭವಿಷ್ಯ ನಿಧಿ | 1,21,19,599.00 | 1,14,08,599.00 |
| 4. | ದಿಗ್ದರ್ಶಕ ಸಭೆ ಮತ್ತು ಪ್ರವಾಸ ಭತ್ಯೆ | 2,64,800.00 | 2,80,300.00 |
| 5. | ಬಾಡಿಗೆ, ಕರ, ವಿಮೆ, ದೀಪ | 32,79,171.51 | 19,21,470.28 |
| 6. | ಕಾಯ್ದೆ ಸಲಹೆಗಾರರ ಫೀ | 7,17,742.00 | 6,42,399.00 |
| 7. | ಅಂಚೆ, ದೂರವಾಣಿ | 2,43,670.90 | 3,33,012.00 |
| 8. | ಲೆಕ್ಕ, ತಪಾಸಿಗರ ಶುಲ್ಕ | 6,55,300.00 | 4,68,060.00 |
| 9. | ಸವಕಳಿ ಮತ್ತು ದುರಸ್ತಿ | 17,71,824.00 | 14,94,324.00 |
| 10. | ಸ್ಟೇಶನರಿ ಮುದ್ರಣ ಮತ್ತು ಪ್ರಚಾರ | 4,92,191.00 | 4,03,291.00 |
| 11. | ಇತರ ವೆಚ್ಚಗಳು | 9,93,816.00 | 9,23,957.00 |
| 12. | ಪಿಗ್ಮಿ ಠೇವು ಕಮೀಶನ್ | 26,10,528.00 | 21,98,225.00 |
| 13. | ಉತ್ಪಾದಕ ಆಸ್ತಿಗಳ ಮೇಲಿನ ನಿಧಿ | 5,45,000.00 | 8,50,000.00 |
| 14. | ಭದ್ರತೆಗಳ ಅಮೋರ್ಟೈಜೇಶನ್ | 39,668.00 | 39,100.00 |
| 15. | ಆದಾಯ ತೆರಿಗೆ | 30,00,000.00 | 32,02,900.00 |
| 16. | ವಾರ್ಷಿಕ ಚಂದಾ | 64,200.00 | 91,100.00 |
| 17. | ಗಣಕ ಯಂತ್ರ ಹಾಗೂ ಉಪಕರಣಗಳ ವಾರ್ಷಿಕ ನಿರ್ವಹಣೆ | 12,16,617.00 | 9,57,081.00 |
| 18. | ಪ್ರವಾಸ ಮತ್ತು ಇತರ | 4,77,530.00 | 6,72,326.00 |
| 19. | ABN ಫೀ | 74,261.00 | 25,719.00 |
| 20. | ವಾರ್ಷಿಕ ಮಹಾಸಭೆಯ ಖರ್ಚು | 1,85,208.00 | 1,53,463.00 |
| 21. | ಡೆಲಿಗೇಷನ್ ಫೀ | 14,564.00 | 90,476.00 |
| 22. | ಚುನಾವಣೆ ಖರ್ಚು | -- | 2,85,619.00 |
| 23. | ನಿವ್ವಳ ಲಾಭ | 100,78,912.00 | 87,25,126.00 |
| | | **11,57,93,001.56** | **9,31,43,804.89** |

ಸಹಿ/-

**ಮೆ|| ಹೆಗಡೆ ಗಿರಿ ಆ್ಯಂಡ ಅಸೋಸಿಯೆಟ್ಸ್**
ಚಾರ್ಟರ್ಡ್ ಅಕೌಂಟಂಟ್ಸ್, ಬೆಳಗಾವಿ

**ಕೆ.ಬಿ. ಬಂದಾಯಿ**
ಪ್ರಭಾರ ಪ್ರಧಾನ ವ್ಯವಸ್ಥಾಪಕರು

: ನಿರ್ದೇಶಕರು :

ಶ್ರೀ ವಿಜಯಕುಮಾರ ಬಾಳಪ್ಪಾ ರವದಿ
ಶ್ರೀ ಶಿವಾನಂದ ವೀರಪ್ಪಾ ನೂಲಿ
ಶ್ರೀ ಶಂಕರಗೌಡ ಲಖಮಗೌಡ ಪಾಟೀಲ
ಶ್ರೀ ಗುರುಲಿಂಗಪ್ಪಾ ಈಶ್ವರಪ್ಪಾ ಗಂಧ
ಶ್ರೀ ಮಲ್ಲಿಕಾರ್ಜುನ ಶಿವಲಿಂಗ ತೇರಣಿ
ಶ್ರೀ ಸುಭಾಷ ಮಲಗೌಡಾ ಪಾಟೀಲ
ಶ್ರೀ ಸೋಮಶೇಖರ ಸಾತಪ್ಪಾ ಪಟ್ಟಣಶೆಟ್ಟಿ
ಶ್ರೀ ಸಿದ್ಧೇಶ್ವರ ಚನಬಸಪ್ಪಾ ಹೆದ್ದೂರಶೆಟ್ಟಿ
ಶ್ರೀಮತಿ ಗೌರವ್ವಾ ಗುರುಸಿದ್ದ ನಾಯಿಕ

## ಲಾಭ ಹಾನಿ ಪತ್ರಿಕೆ 2025-26

(₹ ಗಳಲ್ಲಿ)

| | ಆದಾಯಗಳು | 31/03/2026 | 31/03/2025 |
|---|---|---|---|
| 1. | ಸಾಲಗಳ ಮೇಲಿನ ಬಡ್ಡಿ | 7,97,95,537.00 | 6,00,69,261.00 |
| 2. | ಠೇವು ಮತ್ತು ಗುಂತಾವಣೆ ಮೇಲಿನ ಬಡ್ಡಿ | 2,54,53,576.32 | 2,59,02,201.04 |
| 3. | ಕಮೀಶನ್ | 1,69,398.55 | 3,19,635.12 |
| 4. | ಪಿ. ಎಸ್ ಎಲ್ ಮಾರಾಟದ ಆದಾಯ | 40,70,000.00 | 31,61,435.00 |
| 5. | BDDR ಖಾತೆಯಿಂದ ಮರಳಿ ಜಮಾ | 31,00,000.00 | 15,00,000.00 |
| 6. | ಇತರ | 32,04,489.69 | 21,91,272.73 |
| | | **11,57,93,001.56** | **9,31,43,804.89** |

**ಶ್ರೀ ಪ್ರಭು ವೀರಭದ್ರಪ್ಪಾ ಸಾಂಬಾರೆ**
ಉಪಾಧ್ಯಕ್ಷರು

**ಶ್ರೀ ಚಂದ್ರಶೇಖರ ಮಲಗೌಡಾ ಪಾಟೀಲ**
ಅಧ್ಯಕ್ಷರು

: ನಿರ್ದೇಶಕರು :

ಶ್ರೀಮತಿ ಸುವರ್ಣಾ ಕಾಡಪ್ಪಾ ಹುಂಡೇಕಾರ
ಶ್ರೀ ಮೌನೇಶ್ವರ ಸುರೇಶ ಪೋತದಾರ
ಶ್ರೀ ರಾಜು ಮಹಾದೇವ ಬಾಗಲಕೋಟ

ಶ್ರೀ ಮಲ್ಲಿಕಾರ್ಜುನ ಭೀಮಪ್ಪಾ ಕೋಟ್ಯಾಗೋಳ
ಶ್ರೀ ರಾಜ ಉಮೇಶ ಬೋಳಮಲ್ಲ
ಶ್ರೀ ಮಹಾದೇವ ಗುರುಸಿದ್ದಪ್ಪಾ ಖಿಡಬಿಡಿ

## ದಿನಾಂಕ 31-03-2026 ಕ್ಕೆ ಅಢಾವೆ ಪತ್ರಿಕೆ

| | ಬಂಡವಾಳ ಮತ್ತು ಜವಾಬ್ದಾರಿ | | 31/03/2026 | 31/03/2025 |
|---|---|---|---|---|
| 1. | ಬಂಡವಾಳ : ಅಧಿಕೃತ ಶೇರ್‌ಅರ ಬಂಡವಾಳ : | 2,62,50,242.00 | **2,62,50,242.00** | **2,41,45,765.00** |
| 2. | ಕಾಯ್ದಿಟ್ಟ ಹಾಗೂ ಇತರ ನಿಧಿಗಳು : | | | |
| | ಕಾಯ್ದಿಟ್ಟ ನಿಧಿ | 3,64,57,473.00 | | |
| | ಮುಳುಗುವ ಹಾಗೂ ಸಂಶಯಯುಕ್ತ ಸಾಲ ನಿಧಿ | 2,00,66,740.00 | | |
| | ಉತ್ಪಾದಕ ಆಸ್ತಿಗಳ ಮೇಲಿನ ನಿಧಿ | 28,20,000.00 | | |
| | ಗುಂತಾವಣೆ ಏರಿಳಿತ ನಿಧಿ | 3,36,180.00 | | |
| | ಕಟ್ಟಡ ನಿಧಿ | 1,27,81,680.00 | | |
| | ಮಹೋತ್ಸವ ನಿಧಿ | 15,39,459.00 | | |
| | ಧರ್ಮದಾಯ ನಿಧಿ | 2,48,765.00 | | |
| | ಸದಸ್ಯರ ಮರಣೋತ್ತರ ಸಹಾಯ ನಿಧಿ | 4,79,201.00 | | |
| | ಸದಸ್ಯರ ಕ್ಷೇಮ ನಿಧಿ | 11,15,747.00 | | |
| | ಸಿಬ್ಬಂದಿ ಕ್ಷೇಮ ನಿಧಿ | 10,19,961.00 | **7,68,65,206.00** | **7,32,00,053.00** |
| 3. | ಠೇವುಗಳು: | | | |
| | ಉಳಿತಾಯ ಠೇವು | 9,95,47,222.35 | | |
| | ಚಾಲ್ತಿ ಠೇವು | 3,22,31,923.36 | | |
| | ಮುದ್ದತಿ ಠೇವು | 103,48,41,620.00 | **116,66,20,765.71** | **94,50,68,096.47** |
| 4. | ಪಡೆದ ಸಾಲಗಳು : | | -- | |
| 5. | ವಸೂಲಿಗಾಗಿ ಬಂದ ಬಿಲ್ಲುಗಳು : | | -- | |
| 6. | ಶಾಖಾ ವರ್ಗಾವಣೆಗಳು : | | -- | |
| 7. | ಬರತಕ್ಕ ಬಡ್ಡಿ (ಕಾಂಟ್ರಾ) | | **2,90,85,348.00** | **2,27,81,633.00** |
| 8. | ಕೊಡಬೇಕಾದ ಬಡ್ಡಿ (ಠೇವಿನ ಮೇಲೆ) | | **4,05,84,508.00** | **3,15,04,105.00** |
| 9. | ಇತರ ಜವಾಬ್ದಾರಿಗಳು : | | | |
| | ಅಮಾನತ | 2,01,888.00 | | |
| | ಲಾಭಾಂಶ | 12,03,640.00 | | |

## ದಿನಾಂಕ 31-03-2026 ಕ್ಕೆ ಅಢಾವೆ ಪತ್ರಿಕೆ

| ಆಸ್ತಿ ಮತ್ತು ಜಿಂದಗಿ | | | 31/03/2026 | 31/03/2025 |
|---|---|---|---|---|
| 1. | ನಗದು :<br>ನಗದು ಶಿಲ್ಕು ಮತ್ತು ಇತರ ಬ್ಯಾಂಕುಗಳ<br>ಚಾಲ್ತಿ ಖಾತೆಯಲ್ಲಿ ಶಿಲ್ಕು | | **9,63,27,845.01** | **8,88,07,415.39** |
| 2. | ಬ್ಯಾಂಕುಗಳಲ್ಲಿ ಠೇವುಗಳು :<br>ಮುದ್ದತಿ ಠೇವುಗಳು | | **16,86,79,811.00** | **15,31,50,780.00** |
| 3. | ಕರೆ ಠೇವುಗಳು | | -- | |
| 4 | ಗುಂತಾವಣೆಗಳು :<br>ಕೇಂದ್ರ ಹಾಗೂ ರಾಜ್ಯ ಸರಕಾರಿ ಭದ್ರತೆಗಳಲ್ಲಿ<br>ಇತರ ಸಹಕಾರಿ ಸಂಘಗಳ ಶೇಅರಗಳಲ್ಲಿ | 28,69,82,000.00<br>30,575.00 | **28,70,12,575.00** | **22,88,22,384.00** |
| 5 | ಸಾಲಗಳು ಮತ್ತು ಮುಂಗಡಗಳು :<br>ಅಲ್ಪಾವಧಿ ಮತ್ತು ನಗದು ಪತ್ತಿನ ಸಾಲಗಳು<br>ಮಧ್ಯಮಾವಧಿ ಸಾಲಗಳು<br>ದೀರ್ಘಾವಧಿ ಸಾಲಗಳು | 34,33,37,020.10<br>8,48,58,099.00<br>30,75,60,979.00 | **73,57,56,098.10** | **58,89,79,919.00** |
| 6. | ಬರತಕ್ಕ ಬಡ್ಡಿ : (ಗುಂತಾವಣೆಗಳ ಮೇಲೆ<br>ಹಾಗೂ ಉತ್ಪಾದಕ ಆಸ್ತಿಗಳ ಮೇಲೆ) | | **2,30,39,178.56** | **1,63,71,948.05** |
| 7. | ಬರತಕ್ಕ ಬಡ್ಡಿ (ಕಾಂಟ್ರಾ) : | | **2,90,85,348.00** | **2,27,81,633.00** |
| 8. | ವಸೂಲಿಗಾಗಿ ಬಂದ ಬಿಲ್ಲುಗಳು | | -- | |
| 9. | ಶಾಖಾ ವರ್ಗಾವಣೆಗಳು : | | -- | |
| 10. | ಕಟ್ಟಡ | | **9,02,908.00** | **10,03,234.00** |
| 11. | ಪೀಠೋಪಕರಣಗಳು : | | **24,16,724.00** | **26,31,560.00** |
| 12. | ಇತರ ಆಸ್ತಿಗಳು :<br>ಗಣಕಯಂತ್ರ ಹಾಗೂ ಉಪಕರಣಗಳು<br>ಡೆಡ್ ಸ್ಟಾಕ್ | <br>15,73,251.04<br>54,14,956.00 | | |

## ದಿನಾಂಕ 31-03-2026 ಕ್ಕೆ ಅಢಾವೆ ಪತ್ರಿಕೆ

| ಬಂಡವಾಳ ಮತ್ತು ಜವಾಬ್ದಾರಿ | | 31/03/2026 | 31/03/2025 |
|---|---|---|---|
| ಲೆಕ್ಕ ಪರಿಶೋಧನಾ ಶುಲ್ಕ | 4,00,000.00 | | |
| ಆದಾಯ ತೆರಿಗೆ ಕೊಡತಕ್ಕದ್ದು | 59,240.00 | | |
| ಇತರ ಕೊಡತಕ್ಕವುಗಳು | 7,34,991.00 | **25,99,759.00** | **27,40,042.01** |
| 10. ನಿವ್ವಳ ಲಾಭ : | | | |
| ಪ್ರಸಕ್ತ ಸಾಲಿನ ನಿವ್ವಳ ಲಾಭ | | **100,78,912.00** | **87,25,126.00** |
| **ಒಟ್ಟು** | | **135,20,84,740.71** | **110,81,64,820.48** |

| | | | |
|---|---|---|---|
| ಇತರ ಹೊಣೆಗಾರಿಕೆಗಳು : | | | |
| ಇತರ DEAF A/c. | | **13,40,875.61** | **13,40,875.61** |

| | | |
|---|---|---|
| ಶ್ರೀ. ಕೆ. ಬಿ. ಬಂದಾಯಿ<br>ಪ್ರಭಾರ ಪ್ರಧಾನ ವ್ಯವಸ್ಥಾಪಕರು | ಶ್ರೀ ಪ್ರಭು ವೀರಭದ್ರಪ್ಪಾ ಸಾಂಬಾರೆ<br>ಉಪಾಧ್ಯಕ್ಷರು | ಶ್ರೀ ಚಂದ್ರಶೇಖರ ಮಲಗೌಡಾ ಪಾಟೀಲ<br>ಅಧ್ಯಕ್ಷರು |

: ನಿರ್ದೇಶಕರು :

| | | |
|---|---|---|
| ಶ್ರೀ ವಿಜಯಕುಮಾರ ಬಾಳಪ್ಪಾ ರವದಿ | ಶ್ರೀ ಸಿದ್ಧೇಶ್ವರ ಚನಬಸಪ್ಪಾ ಹೆದ್ದೂರಶೆಟ್ಟಿ | [illegible] |
| ಶ್ರೀ ಗುರುಲಿಂಗಪ್ಪಾ ಈಶ್ವರಪ್ಪಾ ಗಂಧ | ಶ್ರೀ ಶಂಕರಗೌಡ ಲಖಮಗೌಡ ಪಾಟೀಲ | [illegible] |
| ಶ್ರೀ ಸೋಮಶೇಖರ ಸಾತಪ್ಪಾ ಪಟ್ಟಣಶೆಟ್ಟಿ | ಶ್ರೀ ಸುಭಾಷ ಮಲಗೌಡಾ ಪಾಟೀಲ | ಶ್ರೀ ಮಲ್ಲಿಕಾರ್ಜುನ ಭೀಮಪ್ಪಾ ಕೋಟ್ಯಾಗೋಳ |
| ಶ್ರೀ ಶಿವಾನಂದ ವೀರಪ್ಪಾ ನೂಲಿ | ಶ್ರೀಮತಿ ಗೌರವ್ವಾ ಗುರುಸಿದ್ದ ನಾಯಿಕ | ಶ್ರೀ ರಾಜ ಉಮೇಶ ಬೋಳಮಲ್ಲ |
| ಶ್ರೀ ಮಲ್ಲಿಕಾರ್ಜುನ ಶಿವಲಿಂಗ ತೇರಣಿ | ಶ್ರೀಮತಿ ಸುವರ್ಣಾ ಕಾಡಪ್ಪಾ ಹುಂಡೇಕಾರ | ಶ್ರೀ ಮಹಾದೇವ ಗುರುಸಿದ್ದಪ್ಪಾ ಖಡಬಡಿ |

## ದಿನಾಂಕ 31-03-2026 ಕ್ಕೆ ಅಢಾವೆ ಪತ್ರಿಕೆ

| ಆಸ್ತಿ ಮತ್ತು ಜಿಂದಗಿ | | 31/03/2026 | 31/03/2025 |
|---|---|---|---|
| ಗ್ರಂಥಾಲಯ | 11,647.00 | | |
| ಮುಂಗಡಗಳು | 17,88,155.00 | | |
| ಮೈಕ್ರೋಸಾಫ್ಟ್ ಲೈಸೆನ್ಸ್ | 76,244.00 | **88,64,253.04** | **56,15,947.04** |
| **ಒಟ್ಟು** | | **135,20,84,740.71** | **110,81,64,820.48** |

## ದೃಡೀಕರಣ ಪತ್ರ

ದಿ. ಹುಕ್ಕೇರಿ ಅರ್ಬನ್ ಕೋ-ಆಪ್ ಬ್ಯಾಂಕ್.ಲಿ ಹುಕ್ಕೇರಿ ಇದರ ಸನ್ 2025-2026 ನೇ ಸಾಲಿನ ಲೆಕ್ಕ ಪತ್ರಗಳನ್ನು ನಾವು ಪರಿಶೋಧಿಸಿರುತ್ತೇವೆ. ನಮ್ಮ ತಿಳುವಳಿಕೆ ಮತ್ತು ನಂಬಿಕೆಗೆ ಅನುಸಾರವಾಗಿ ಹಾಗೂ ನಮಗೆ ಒದಗಿಸಿದ ಮಾಹಿತಿಗಳು ಹಾಗೂ ದಸ್ತಾವೇಜಗಳ ಆಧಾರದ ಮೇರೆಗೆ ಮತ್ತು ಶಾಸನಬದ್ಧ ಲೆಕ್ಕ ಪರಿಶೋಧನಾ ವರದಿಯ ಶರಾಕ್ಕೆ ಒಳಪಟ್ಟು ದಿನಾಂಕ 31 ಮಾರ್ಚ 2026 ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆ ಹಾಗೂ ಲಾಭ-ಹಾನಿ ತಃಖ್ತೆಯು ಬ್ಯಾಂಕಿನ ನೈಜ ಹಾಗೂ ಸತ್ಯ ಸಾಂಪತ್ತಿಕ ಸ್ಥಿತಿಯನ್ನುತೋರಿಸುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇವೆ.

ಸಹಿ/-

**ಮೆ|| ಹೆಗಡೆ ಗಿರಿ ಆ್ಯಂಡ ಅಸೋಸಿಯೆಟ್ಸ್**

ಚಾರ್ಟರ್ಡ್ ಅಕೌಂಟಂಟ್ಸ್, ಬೆಂಗಳೂರು

ಮೆ.ನಂ: 215324 ಫರ್ಮ ನಂ: 014865 S

ಹುಕ್ಕೇರಿ :

ದಿನಾಂಕ : 27-06-2026

# ದಿ ಹುಕ್ಕೇರಿ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ ಹುಕ್ಕೇರಿ

98 1928-2026

## ಅಂದಾಜು ಪತ್ರಿಕೆ ಸನ್ 2026-27

| | ಆದಾಯದ ವಿವರಗಳು | 2025-26 ರ ಅಂದಾಜು | 2025-26 ರಲ್ಲಿ ಪ್ರತ್ಯಕ್ಷ ಜಮಾ | 2026-27 ರ ಅಂದಾಜು |
|---|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 7,60,00,000.00 | 7,97,95,537.00 | 10,40,00,000.00 |
| 2 | ಗುಂತಾವಣೆ ಹಾಗೂ ಠೇವಿನ ಮೇಲಿನ ಬಡ್ಡಿ | 2,60,00,000.00 | 2,54,53,576.32 | 3,40,00,000.00 |
| 3 | ಕಮೀಶನ್ | 3,50,000.00 | 1,69,398.55 | 2,50,000.00 |
| 4 | ಇತರ ಆದಾಯಗಳು | 24,00,000.00 | 32,04,489.69 | 35,00,000.00 |
| 5 | ಪಿ.ಎಸ್.ಎಲ್.ಸಿ | 40,70,000.00 | 40,70,000.00 | 64,00,000.00 |
| 6 | BDDR ಖಾತೆಯಿಂದ ಮರಳಿ ಜಮಾ | -- | 31,00,000.00 | -- |
| | **ಒಟ್ಟು ರೂ :** | **10,88,20,000.00** | **11,57,93,001.56** | **14,81,50,000.00** |

| | ಖರ್ಚಿನ ವಿವರಗಳು | 2025-26 ರ ಅಂದಾಜು | 2025-26 ರಲ್ಲಿ ಪ್ರತ್ಯಕ್ಷ ಖರ್ಚು | 2026-27 ರ ಅಂದಾಜು |
|---|---|---|---|---|
| 1 | ಠೇವುಗಳ ಮೇಲಿನ ಬಡ್ಡಿ ಮತ್ತು ಕಮೀಶನ್ | 7,20,00,000.00 | 7,95,58,927.15 | 10,00,00,000.00 |
| 2 | ಸಂಬಳ, ಭತ್ಯೆ, ಭವಿಷ್ಯ ನಿಧಿ | 1,20,00,000.00 | 1,21,19,599.00 | 2,00,00,000.00 |
| 3 | ನಿರ್ದೇಶಕರ ಸಭೆ ಮತ್ತು ಪ್ರವಾಸ ಭತ್ಯೆ | 3,00,000.00 | 2,64,800.00 | 3,00,000.00 |
| 4 | ಬಾಡಿಗೆ, ಕರ, ವಿಮೆ ಮತ್ತು ದೀಪ | 22,00,000.00 | 32,79,171.51 | 40,00,000.00 |
| 5 | ಕಾಯ್ದೆ ಸಲಹೆಗಾರರ ಫೀ | 7,00,000.00 | 7,17,742.00 | 7,00,000.00 |
| 6 | ಅಂಚೆ, ದೂರವಾಣಿ | 3,00,000.00 | 2,43,670.90 | 3,00,000.00 |
| 7 | ಲೆಕ್ಕ ತಪಾಸಿಗರ ಫೀ | 5,00,000.00 | 6,55,300.00 | 7,00,000.00 |
| 8 | ಆಸ್ತಿಯ ಮೇಲಿನ ಸವಕಳಿ ಮತ್ತು ದುರಸ್ತಿ | 17,00,000.00 | 17,71,824.00 | 20,00,000.00 |
| 9 | ಸ್ಟೇಶನರಿ, ಮುದ್ರಣ ಮತ್ತು ಪ್ರಚಾರ | 4,50,000.00 | 4,92,191.00 | 5,00,000.00 |
| 10 | ಎನ್‌ಪಿಎ ಹಾಗೂ ಇತರ ಕಾಯ್ದಿರಿಸುವಿಕೆಗಳು | 15,00,000.00 | 5,45,000.00 | 15,00,000.00 |
| 11 | ಆದಾಯ ತೆರಿಗೆ | 35,00,000.00 | 30,00,000.00 | 35,00,000.00 |
| 12 | ಗಣಕಯಂತ್ರಗಳ ವಾರ್ಷಿಕ ನಿರ್ವಹಣಾ ಶುಲ್ಕ | 10,00,000.00 | 12,16,617.00 | 15,00,000.00 |
| 13 | ವಾರ್ಷಿಕ ಚಂದಾ ಶುಲ್ಕ | 2,00,000.00 | 64,200.00 | 1,00,000.00 |
| 14 | ಜಿಓಆಯ್ ಪ್ರೀಮಿಯಂ ಕಂತು | 50,000.00 | 39,668.00 | 50,000.00 |
| 15 | ವಾರ್ಷಿಕ ಮಹಾಸಭೆಯ ಖರ್ಚು | 2,00,000.00 | 1,85,208.00 | 2,50,000.00 |
| 16 | ಪ್ರವಾಸ ಇತರ ಖರ್ಚುಗಳು | 18,00,000.00 | 15,60,171.00 | 18,00,000.00 |
| 17 | ಅಂದಾಜು ಲಾಭ | 1,04,20,000.00 | 1,00,78,912.00 | 1,09,50,000.00 |
| | **ಒಟ್ಟು ರೂ** | **10,88,20,000.00** | **11,57,93,001.56** | **14,81,50,000.00** |

ಅ.ನಂ 1 ಠೇವುಗಳಲ್ಲಿ ಹೆಚ್ಚಳವಾದುದರಿಂದ
ಅ.ನಂ 2 ತುಟ್ಟ ಭತ್ತೆ ಹೆಚ್ಚಳವಾದುದರಿಂದ
ಅ.ನಂ 4 ಠೇವುಗಳಲ್ಲಿ ಹೆಚ್ಚಳವಾದುದರಿಂದ
ಅ.ನಂ 5 2 ಜನ ಸಲಹೆಗಾರರ ವೇತನ ಹೆಚ್ಚಳವಾದರಿಂದ
ಅ.ನಂ 7 ಆಡಿಟ ದರದಲ್ಲಿ ಏರಿಕೆ
ಅ.ನಂ. 8 ಮಾರುಕಟ್ಟೆಯ ಬೆಲೆ ಏರಿಕೆಯಿಂದ
ಅ.ನಂ. 9 ಮಾರುಕಟ್ಟೆಯ ಬೆಲೆ ಏರಿಕೆಯಿಂದ
ಅ.ನಂ 12 ಹೆಚ್ಚು ಗಣಕ ಯಂತ್ರಗಳನ್ನು ಅಳವಡಿಸಿದ್ದರಿಂದ

**ಈ ಪ್ರಕಾರ ವೆಚ್ಚಗಳಲ್ಲಿ ಹೆಚ್ಚಳವಾಗಿರುತ್ತದೆ. ಅದಕ್ಕೆ ತಮ್ಮ ಅನುಮೋದನೆ ನೀಡಬೇಕಾಗಿ ವಿನಂತಿ**

## Disclosure in financial statements – 'Notes to Accounts'

**1. Regulatory Capital**

**a) Composition of Regulatory Capital** **(Amount in lakhs)**

| Sr.No | Particulars | Current Year 2025-2026 | Previous Year 2024-2025 |
|---|---|---|---|
| i) | Paid up share capital and reserves (net of deductions, if any) | 262.5 | 241.46 |
| ii) | Other Tier 1 capital | 585.49 | 485.11 |
| iii) | Tier 1 capital (i + ii) | 847.99 | 726.57 |
| iv) | Tier 2 capital | 81.56 | 65.20 |
| v) | Total capital (Tier 1+Tier 2) | 929.55 | 791.77 |
| vi) | Total Risk Weighted Assets (RWAs) | 6,304.01 | 5,156.48 |
| vii) | Paid-up share capital and reserves as percentage of RWAs | 4.16% | 4.68% |
| viii) | Tier 1 Ratio (Tier 1 capital as a percentage of RWAs) | 13.45% | 14.09% |
| ix) | Tier 2 Ratio (Tier 2 capital as a percentage of RWAs) | 1.29% | 1.26% |
| x) | Capital to Risk Weighted Assets Ratio (CRAR) (Total Capital as a percentage of RWAs) | 14.75% | 15.35% |
| a | Amount of Tier 2 capital raised during the year of which: | | |
| b | Perpetual Cumulative PreferenceShares | 0 | 0 |
| c | Redeemable Non-Cumulative PreferenceShares | 0 | 0 |

**b) Draw down from Reserves - Since there is excess provission under Bad and Doubtful Debt Reserve bank has charged back Rs. 31 Lakhs from BDDR created from P&L A/c.**

**2. Asset Liability Management**

**a) Maturity pattern of certain items of assets and liabilities** **(Amount in ₹ lakh)**

| | 1 to 14 days | 15 to 28 days | 29 days to 3 months | over 3 to 6 months | over 6 months to 1 year | Over 1 to 3 years | over 3 to 5 years | over 5 years | Total |
|---|---|---|---|---|---|---|---|---|---|
| Deposits | 1230.619 | 223.1715 | 1399.8193 | 2058.7635 | 4590.3238 | 2121.1812 | 15.7531 | 26.5763 | 11666.2077 |
| Advances | 511.2715 | 90.3519 | 428.3909 | 805.1179 | 2358.411 | 1016.5185 | 894.7854 | 1252.7139 | 7357.561 |
| Investments | 1561.441 | 0 | 374.0675 | 76.4874 | 746.1392 | 179.5967 | 422.7128 | 1196.1735 | 4556.6181 |
| Borrowings | 0 | 0 | 0 | 0 | 0 | 0 | | 0 | 0 |

## 3 . Investments

### a) Composition of Investment Portfolio

(Amount in lakh)

| | As at 31.03.2026 | | | | | | | As at 31.03.2025 | | | | | | |
|---|---|---|---|---|---|---|---|---|---|---|---|---|---|---|
| | Investments in India | | | | | | | Investments in India | | | | | | |
| | Government Securities | Other Approved Securities (SDL) | Shares | Debentures and Bonds | Subsidiaries and/or joint ventures | Others | Total Investments in India | Government Securities | Other Approved Securities (SDL) | Shares | Debentures and Bonds | Subsidiaries and/or joint ventures | Others | Total Investments in India |
| **Held to Maturity** | | | | | | | | | | | | | | |
| **Gross** | **2869.82** | | | | | **0.31** | **2870.13** | **2287.91** | | | | | **0.31** | **2288.22** |
| Less: Provision for non-performing investments (NPI) | - | | | | | | 0.00 | - | | | | | | 0.00 |
| **Net** | **2869.82** | **0.00** | **0.00** | **0.00** | **0.00** | **0.31** | **2870.13** | **2287.91** | **0.00** | **0.00** | **0.00** | **0.00** | **0.31** | **2288.22** |
| **Available for Sale** | | | | | | | | | | | | | | |
| Gross | 0.00 | | | | | | 0.00 | 0.00 | | | | | | 0.00 |
| Less: Provision for depreciation and NPI | | | | | | | 0.00 | | | | | | | 0.00 |
| **Net** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** | **0.00** |
| **Held for Trading** | | | | | | | | | | | | | | |
| **Total Investments** | **2869.82** | **0.00** | **0.00** | **0.00** | **0.00** | **0.31** | **2870.13** | **2287.91** | **0.00** | **0.00** | **0.00** | **0.00** | **0.31** | **2288.22** |
| Less: Provision for non-performing investments | - | - | - | - | - | - | - | - | - | - | - | - | - | - |
| Less: Provision for depreciation and NPI | - | - | - | - | - | - | 0.00 | - | - | - | - | - | - | 0.00 |
| **Net** | **2869.82** | **0.00** | **0.00** | **0.00** | **0.00** | **0.31** | **2870.13** | **2287.91** | **0.00** | **0.00** | **0.00** | **0.00** | **0.31** | **2288.22** |

Note : Bank has No Investment's Outside India for the FY 2025-26 and FY 2024-25

**b) Movement of Provisions for Depreciation and Investment Fluctuation Reserve**

**(Amount in lakh)**

| | Current Year | Previous Year |
|---|---|---|
| i) Movement of provisions held towards depreciation on investments investments | | |
| a) Opening balance | 0.00 | 0 |
| b) Add: Provisions made during theyear | 0 | 0 |
| c) Less: Write off / write back of excess provisions during the year | 0 | 0 |
| d) Closing balance | **0.00** | **0.00** |
| ii) Movement of Investment FluctuationReserve | | |
| a) Opening balance | 3.36 | 3.36 |
| b) Add: Amount transferred during theyear | 0 | 0 |
| c) Less:Drawdown | 0 | 0 |
| d) Closing balance | **3.36** | **3.36** |
| iii ) Closing balance in IFR as a percentage of closing balance of investments in AFS and HFT/Current category investments in AFS and HF | | |

**c) Sale and transfers to/from HTM category -**
**During the Financial Year bank has Transferred to/from HMT Category**

**d) Non-SLR investment portfolio**

**i) Non-performing non-SLR investments -** There are no Non performing Non SLR Investments.

**ii) Issuer composition of Non-SLR Investments** **(Amount in ₹ lakh)**

| Sr.No | Issuer | Amount | | Extent of Private Placement | | Extent of 'Below Investment Grade' Securities | | Extent of 'Unrated' Securities | | Extent of 'Unlisted' Securities | |
|---|---|---|---|---|---|---|---|---|---|---|---|
| -1 | -2 | -3 | | -4 | | -5 | | -6 | | -7 | |
| | | 25-26 | 24-25 | 25-26 | 24-25 | 25-26 | 24-25 | 25-26 | 24-25 | 25-26 | 24-25 |
| a) | PSUs | | | | | | | | | | |
| b) | FIs | | | | | | | | | | |
| c) | Banks | 1686.79 | 1531.51 | | | | | | | | |
| d) | Private Corporates | | | | | | | | | | |
| e) | Subsidiaries/ Joint Ventures | | | | | | | | | | |
| f) | Others | 0.00 | 0.00 | | | | | | | | |
| g) | Provision held towards depreciation | | | | | | | | | | |
| | **Total *** | **1686.79** | **1531.51** | **0.00** | **0.00** | **0.00** | **0.00** | **0.00** | **0.00** | **0.00** | **0.00** |

### 4. Asset Quality

**a) Classification of advances and provisions held** **(Amount in ₹ lakh)**

| | Standard | Non-Performing | | | | Total |
|---|---|---|---|---|---|---|
| | | Sub- standard | *Doubtful* | *Loss* | Total Non-Performing Advances | |
| **Gross Standard Advances and NPAs** | | | | | | |
| Opening Balance | 5,620.07 | 104.66 | 165.07 | 0.00 | 269.73 | 5,889.80 |
| Add: Additions during the year | | | - | - | - | - |
| Less: Reductions during the year* | | | | - | - | - |
| Closing balance | 7,047.14 | 115.29 | 195.12 | 0.00 | 310.41 | 7,357.55 |
| *Reductions in Gross NPAs due to: | | | | | | |
| Upgradation | | - | - | - | - | |
| Recoveries (excluding recoveries from upgraded accounts) | | | | | - | |
| Write-offs | | - | - | - | - | |
| **Provisions (excluding Floating Provisions)** | | | | | | |
| Opening balance of provisions held | 22.75 | 32.79 | 192.95 | 0.00 | 225.74 | 248.49 |
| Add: Fresh provisions made during the year | 5.45 | 0.00 | 5.92 | 0.00 | 5.92 | 11.37 |
| Less: Excess provision reversed/ Write-off loans | 0 | 0.00 | 31.00 | 0.00 | 0.00 | 0.00 |
